## ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡ ಹಾಗೂ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ರವರುಗಳು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ

ವಿಷಯ : ಬೆಂಗಳೂರಿನ ದೇವರಚಿಕ್ಕನಹಳ್ಳಿಯ ವಾರ್ಡ್ ನಂ-188ರಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿಎ ನಿವೇಶನ 12/1 ಹಂಚಿಕೆಯಾಗಿರುತ್ತದೆ. ಸ್ಥಳೀಯ ಭೂಗಳ್ಳರ ಪರವಾಗಿ ಯಾವುದೇ ಆದೇಶ/ದಾಖಲಾತಿ ಇಲ್ಲದಿದ್ದರೂ ಸಹ ಸ್ಥಳೀಯ ಪೊಲೀಸ್ ಅಧಿಕಾರಿಗಳ ರಕ್ಷಣೆ ಪಡೆದು, ಸರ್ಕಾರಿ ಜಮೀನನ್ನು ಕಬಳಿಸುವ ಸಲುವಾಗಿ ಏಕಾಏಕಿ ದಿನಾಂಕ:23.10.2020 ರಂದು ಭೂಗಳ್ಳರು ದಾಳಿ ನಡೆಸಿ, ಕಾಂಪೌಂಡನ್ನು ಕೆಡವಿ, ಸಿ.ಸಿ. ಕ್ಯಾಮರಾಗಳನ್ನು ಹೊಡೆದು ಹಾಕಿ, ಅತಿಕ್ರಮಣ ಪ್ರವೇಶ ಮಾಡಿ, ಕಾಮಗಾರಿಗೆ ಅಡ್ಡಿ ಉಂಟುಪಡಿಸಿರುತ್ತಾರೆ. ಈ ಸಂಬಂಧ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ದೂರು ನೀಡಿದ್ದರೂ, ಕೇವಲ ಒಬ್ಬರ ಮೇಲೆ ಮಾತ್ರ ದೂರನ್ನು ದಾಖಲಿಸುವ ಮೂಲಕ ದೂರನ್ನು ದುರ್ಬಲಗೊಳಿಸುತ್ತಿದ್ದಾರೆ. ಅತಿಕ್ರಮಿತ ಪ್ರದೇಶದಲ್ಲಿ ಭೂಗಳ್ಳರು ಪೆಟ್ಟಿಗೆ ಅಂಗಡಿಗಳನ್ನು ಅನಧಿಕೃತವಾಗಿ ನಿರ್ಮಿಸಿರುವುದಲ್ಲದೆ, ಕಳೆದ 6 ತಿಂಗಳ ಹಿಂದೆ ಸದರಿ ಬಂಕಿನಲ್ಲಿ ಡೀಸೆಲ್ ತುಂಬಿಸಿದ್ದರೂ ಅದನ್ನು ಮಾರಾಟ ಮಾಡಲು ಅವಕಾಶ ನೀಡುತ್ತಿಲ್ಲ. ಪೊಲೀಸರು ಭೂಗಳ್ಳರ ಪರವಾಗಿಯೇ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗೆ ನಷ್ಟ ಉಂಟಾಗಿದ್ದು, ಸಾರ್ವಜನಿಕ ಹಿತಾಸಕ್ತಿಯ ಹಿನ್ನಲೆಯಲ್ಲಿ ಉಂಟಾಗಿರುವ ಗಂಭೀರ ಸಮಸ್ಯೆಯ ಕುರಿತು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇವೆ.

## ಸರ್ಕಾರದ ಹೇಳಿಕೆ

ದಿನಾಂಕ:-31.10.2020 ರಂದು 20.35 ಗಂಟೆಗೆ ಶ್ರೀ ಪ್ರಶಾಂತ್ ಬಿನ್ ಪ್ರತಾಪ್ 33 ವರ್ಷ ಅಸಿಸ್ಟೆಂಟ್ ಮ್ಯಾನೇಜರ್ ಮೆ॥ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್ ನಂ-29, ಪಿ ಕಾಳಿಂಗರಾವ್ ರೋಡ್, ಅಂಜುಮಾನ್ ಕೆ.ಆರ್ ಟವರ್ಸ್ ಮಿಷನ್ ರೋಡ್ ರಿಚ್ಮಂಡ್ ಸರ್ಕಲ್ ಬೆಂಗಳೂರು ಇವರು ಠಾಣೆಗೆ ಬಂದು ನೀಡಿದ ದೂರಿನ ಸಾರಾಂಶವೇನೆಂದರೆ ನಮ್ಮ ಕಂಟ್ರಾಕ್ಟರ್ ಮೆ॥ ಮಹಾ ಕನ್‌ಸ್ಟ್ರಕ್ಷನ್ ರವರು ತಿಳಿಸಿದ್ದೇನೆಂದರೆ, ದಿನಾಂಕ:-30.10.2020 ರಂದು ಸುಮಾರು 12.00 ಗಂಟೆ ಸಮಯದಲ್ಲಿ ಕೆಲವು ಅಪರಿಚಿತರು ದೊಡ್ಡ ಯಂತ್ರಗಳೊಂದಿಗೆ ಸ್ವತ್ತಿನಲ್ಲಿ ನಿರ್ಮಿಸಿದ್ದ ಶೀಟಿನ ಫೆನ್ಸಿಂಗ್ ಅನ್ನು ಕೆಡವಿ ಹಾಕಿ ಸುಮಾರು ರೂ: 20 ಲಕ್ಷಗಳಷ್ಟು ನಷ್ಟಪಡಿಸಿರುತ್ತಾರೆ. ಈ ವಿಷಯದ ಬಗ್ಗೆ ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ನೀಡಿದ ದೂರನ್ನು ಪಡೆದು ಹುಳಿಮಾವು ಪೊಲೀಸ್ ಠಾಣೆಯ ಮೊ.ಸಂ.203/2020 ಕಲಂ-427, 447 ರೆ/ವಿ 34 ಐ.ಪಿ.ಸಿ. ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

ಈ ಪ್ರಕರಣದ ತನಿಖಾ ಕಾಲದಲ್ಲಿ ದಾಖಲಾತಿಗಳನ್ನು ಪರಿಶೀಲಿಸಲಾಗಿ ಬೆಂಗಳೂರು ನಗರದ ಬಿಟಿಎಂ ಲೇಔಟ್ 4ನೇ ಹಂತದಲ್ಲಿರುವ ಸಿಎ [ಸಿವಿಕ್ ಅಮೆನಿಟಿಸ್] ಸೈಟ್ ನಂ-12/1 ಅನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರಮ ಸಂಖ್ಯೆ-641 ರೀತ್ಯಾ ದಿನಾಂಕ :25.01.2019 ರಂದು ಹಂಚಿಕೆ ಮಾಡಿರುತ್ತದೆ. ಈ ವಿಷಯದ ಬಗ್ಗೆ ಮೆ॥ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಮತ್ತು ಬಿಡಿಎ ನಡುವೆ ಸಿಎ ಸೈಟ್ ಲೀಸ್ ಅಗ್ರಿಮೆಂಟ್ ಏರ್ಪಟ್ಟಿದ್ದು ಸದರಿ ಸಿಎ ಸೈಟ್ ಲೀಸ್ ಅಗ್ರೀಮೆಂಟ್ ದಾಖಲಾತಿಯು ದಿನಾಂಕ:-04.11.2019 ರಂದು ಬೆಂಗಳೂರು ನಗರ ಜಿಲ್ಲೆ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ-5288/2019/2020 ರೀತ್ಯಾ ನೋಂದಣಿಯಾಗಿರುತ್ತದೆ. ಬಿಡಿಎ ಕಚೇರಿಯ ಆದೇಶ ಸಂಖ್ಯೆ-ಬಿಡಿಎ/ಡಿಎಸ್-1/ಸಿಎ/12/1/2019-20 ರೀತ್ಯಾ ದಿನಾಂಕ : 07.11.2019 ರಂದು ಮೆ॥ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಸಿಎ ಸೈಟ್ ಪೊಸೆಷನ್ ಸರ್ಟಿಫಿಕೇಟ್ ಅನ್ನು ನೀಡಿರುತ್ತದೆ.

...2

ಈ ಪ್ರಕರಣದ ತನಿಖಾ ಕಾಲದಲ್ಲಿ ಆರೋಪಿತ ಸುನೀಲ್‌ಕುಮಾರ್ ರವರು ಅವರ ಕಾರ್ಮಿಕರೊಡನೆ ಮೆ॥ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯವರ ಉಸ್ತುವಾರಿಯಲ್ಲಿದ್ದ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ಶೀಟ್‌ಗಳನ್ನು ಕಿತ್ತುಹಾಕಿ ಹಾನಿಪಡಿಸಿರುವುದು ಪ್ರತ್ಯಕ್ಷ ಸಾಕ್ಷಿದಾರರಾದ ಮಹಾರುದ್ರಮೂರ್ತಿ ರವರ ಹೇಳಿಕೆ ಮತ್ತು ತನಿಖೆಯಿಂದ ಕಂಡು ಬಂದ ಮೇರೆಗೆ ಆರೋಪಿ ಸುನೀಲ್‌ಕುಮಾರ್ ಬಿನ್ ಕೃಷ್ಣಪ್ಪ 34 ವರ್ಷ ವಾಸ:ನಂ.197, ದೊಡ್ಡಮನೆ ಕೃಷ್ಣಪ್ಪ ಲೇಔಟ್, ಅರಕೆರೆ, ಬಿ.ಜಿ. ರಸ್ತೆ, ಬೆಂಗಳೂರು ಈತನನ್ನು ದಿನಾಂಕ:03-12-2020 ರಂದು ದಸ್ತಗಿರಿಪಡಿಸಿ ಕಾನೂನು ರೀತಿ ಕ್ರಮ ಕೈಗೊಂಡಿರುತ್ತದೆ.

ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯ ಪ್ರತಿನಿಧಿ ಶ್ರೀ ಪ್ರಶಾಂತ್ ರವರು ನೀಡಿದ ದೂರಿನಂತೆ ಮೊ.ಸಂ.203/2020 ಕಲಂ 447, 427 ರೆ/ವಿ 34 ಐಪಿಸಿ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡು ಸಾಕ್ಷಾದಾರಗಳನ್ನು ಸಂಗ್ರಹಿಸಿ ಆರೋಪಿಯನ್ನು ದಸ್ತಗಿರಿಪಡಿಸಿ, ಆತನ ವಿರುದ್ಧ ದಿನಾಂಕ :26.07.2021 ರಂದು ಘನ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣ ಪಟ್ಟಿಯನ್ನು ನಿವೇದಿಸಿಕೊಂಡಿದ್ದು, ಹಾಲಿ ಈ ಪ್ರಕರಣವು ಘನ ನ್ಯಾಯಾಲಯದಲ್ಲಿ ಸಿಸಿ ನಂ.17053/2021 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಪ್ರಸ್ತುತ ಘನ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ [ಪಿಟಿಷನ್ ಫಾರ್ ಸ್ಪೆಷಲ್ ಲೀವ್] ನಂ-6496/2021 ದಾವೆಯಲ್ಲಿ ದಿನಾಂಕ:01.07.2021 ರಂದು "Status quo as of today shall be maintained by the parties with regard to the suit property" ಎಂದು ಆದೇಶ ನೀಡಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಘನ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮುಂದಿನ ಕ್ರಮ ಜರುಗಿಸಲಾಗುವುದು.

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಸಂಖ್ಯೆ: ಒಇ 465 ಎಸ್‌ಎಸ್‌ಟಿ 2021